ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1382 (2188)

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು) ಮಾನ್ಯ ರೇಷ್ಮೆ ಕೃಷಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿರೇಕೆರೂರು ತಾಲ್ಲೂಕಿನ ರೈತರು ಹೆಚ್ಚು ರೇಷ್ಮೆ ಉತ್ಪಾದನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಿರೇಕೆರೂರು ತಾಲ್ಲೂಕಿನಲ್ಲಿದ್ದ ರೇಷ್ಮೆ ಅಧಿಕಾರಿಯ ಹುದ್ದೆಯನ್ನು ಕಡಿಮೆ ಮಾಡಲಿಕ್ಕೆ ಕಾರಣವೇನು?

ಇ) ತಾಲ್ಲೂಕಿನಲ್ಲಿ ರೇಷ್ಮೆ ವ್ಯವಸಾಯ ತೀವ್ರವಾಗಿ ಹೆಚ್ಚುತ್ತಿರುವುದರಿಂದ ಕೂಡಲೇ ರೇಷ್ಮೆ ಅಧಿಕಾರಿಗಳ ಹುದ್ದೆಯನ್ನು ಮಂಜೂರು ಮಾಡುವುದು ಅವಶ್ಯಕವೆಂಬುದನ್ನು ಸರ್ಕಾರ ಅರಿತಿದೆಯೆ?

ಈ) ಹಾಗಿದಲ್ಲಿ ರೇಷ್ಮೆ ಅಧಿಕಾರಿ ಹುದ್ದೆಯನ್ನು ಮೊದಲಿದ್ದಂತೆ ಮಂಜೂರು ಮಾಡಿ ಕೂಡಲೇ ಭರ್ತಿ ಮಾಡಲಾಗುವುದೆ ?

ಉ) ಹಿರೇಕೆರೂರು ತಾಲ್ಲೂಕಿಗೆ ರೇಷ್ಮೆ ಅಧಿಕಾರಿಯವರ ಕಛೇರಿ ಕಟ್ಟಡವನ್ನು 1992-93ನೇ ಸಾಲಿನ ಆಯವ್ಯಯದಲ್ಲಿ ಮಂಜೂರು ಮಾಡಿ ಕಟ್ಟಡ ಕೆಲಸವನ್ನು ಪ್ರಾರಂಭಿಸಲಾಗುವುದೇ ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು)

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಉತ್ಪನ್ನವಾಗುವ ಗೂಡಿನ ಶೇಕಡ 9 ರಷ್ಟು ಮಾತ್ರ ಉತ್ಪನ್ನವಾಗುತ್ತಿದೆ.

ಆ) ರೇಷ್ಮೆ ಇಲಾಖೆಯಲ್ಲಿ ಅನೇಕ ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳು ಸೃಷ್ಟಿಗೊಂಡಿದ್ದರೂ ಕೆಲವಾರು ವರ್ಷಗಳಿಂದ ಈ ಹುದ್ದೆಗಳು ಭರ್ತಿ ಯಾಗದೆ ಉಳಿದಿದ್ದರಿಂದ ಜೊತೆಗೆ ಹುದ್ದೆಗಳ ಅವಶ್ಯಕತೆ ಕಂಡುಬರಲಿಲ್ಲವಾದ್ದರಿಂದ ಸದರಿ ಹುದ್ದೆಗಳನ್ನು ರದ್ದುಪಡಿಸಲಾಗಿದೆ.

ಇ) 1992-93ನೇ ಸಾಲಿನಲ್ಲಿ ಹಿರೇಕೆರೂರಿನಲ್ಲಿ ಒಂದು ತಾಂತ್ರಿಕ ಸೇವಾ ಕೇಂದ್ರವನ್ನು ಸ್ಥಾಪಿಸಲು ರಾಷ್ಟ್ರೀಯ ರೇಷ್ಮೆ ಯೋಜನೆ (ಕೆ. ಎಸ್. ಸಿ) 2ನೇ ಹಂತದಲ್ಲಿ ಈ ಕೆಳಕಂಡಂತೆ ಸಿಬ್ಬಂದಿ ವರ್ಗ ಮಂಜೂರಾಗಿರುತ್ತೆ.

1. ರೇಷ್ಮೆ ಕೃಷಿ ವಿಸ್ತರಣಾಧಿಕಾರಿ
2. ರೇಷ್ಮೆ ಕೃಷಿ ನಿರೀಕ್ಷಕರು
3. ರೇಷ್ಮೆ ಕೃಷಿ ಪ್ರದರ್ಶಕರು

ಈ) ಮಂಜೂರಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಕಛೇರಿ ಕಟ್ಟಡವನ್ನು ನಿರ್ಮಿಸಲು ಅಗತ್ಯವಾದ ಒಂದು ಗುಂಟೆ ನಿವೇಶನವನ್ನು ತಾಲ್ಲೂಕು ಪಂಚಾಯಿತಿಯವರು ಇಲಾಖೆಗೆ ಕೊಡಲು ತೀರ್ಮಾನಿಸಿದ್ದಾರೆ. ನಿವೇಶನ ತೆಗೆದುಕೊಂಡ ನಂತರ 92-93ನೇ ಸಾಲಿನಲ್ಲಿ ಕಛೇರಿ ಕಟ್ಟಡ ಕಟ್ಟುವ ಕೆಲಸವನ್ನು ಪ್ರಾರಂಭಿಸಲಾಗುವುದು.

ವಿಷಯ:ಹಿರೇಕೆರೂರು ತಾಲ್ಲೂಕಿನ ನೇಕಾರರಿಗೆ ಪಸತಿ ಕಾರ್ಯಾಗಾರದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1383 (2189)

ಶ್ರೀ ಬಿ. ಹೆಚ್. ಬನ್ನಿಕೋಡ (ಹಿರೇಕೆರೂರು) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿರೇಕೆರೂರು ತಾಲ್ಲೂಕಿನ 23 ಜನ ನೇಕಾರರಿಗೆ ಕಾರ್ಯಾಗಾರದ ನಿರ್ಮಾಣದ ಪ್ರಸ್ತಾವ 21-2-91 ರಂದು ವ್ಯವಸ್ಥಾಪಕರು ಖಾದಿ ಗ್ರಾಮೋದ್ಯೋಗ ಜಿಲ್ಲಾ ಪರಿಷತ್ತು. ಧಾರವಾಡ. ಇವರಿಂದ ತಮ್ಮಲ್ಲಿಯಹಿರೇಕೆರೂರುತಾಲ್ಲೂಕಿನನೇಕಾರರಿಗೆಕೈಕೆಲಸಕಾರ್ಯಾಗಾರ ಸಿಬ್ಬಂದಿಯೇ ?

ಆ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಇ) ಸದರಿ ನೇಕಾರರಿಗೆ ತಮ್ಮ ಉಪ ಜೀವನ ನಡೆಸಲು ಅದರಿಸಿರುವ ನೇಕಾರರಿಗೆ ಅವಶ್ಯವಿರುವ ವಸತಿ ಕಾರ್ಯಗಾರಗಳಿಗೆ ಸರ್ಕಾರದಿಂದ ಸಿಗುವ ಸಹಾಯಧನದ ಮೊತ್ತವೆಷ್ಟು ಹಾಗೂ ಸಾಲ ವೆಷ್ಟು ಮತ್ತು ಒಟ್ಟು ವೆಚ್ಚವೆಷ್ಟು ?

ಈ) ನೇಕಾರರಿಗೆ ಅವಶ್ಯವಿರುವ ವಸತಿ ಕಾರ್ಯಾಗಾರಗಳನ್ನು ಮಂಜೂರು ಮಾಡಿ ಕಾರ್ಯಾಗಾರ ನಿರ್ಮಿಸುವ ಬಗ್ಗೆ ತೀವ್ರ ಕ್ರಮ ಕೈಗೊಳ್ಳುವುದೇ ?

ಉ) ಈ ಕಾರ್ಯಗಾರಗಳನ್ನು ಎಷ್ಟು ಅವಧಿಯಲ್ಲಿ ನಿರ್ಮಿಸಲಾಗುವುದು.

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ಹೌದು.

ಆ) ಈ ಸಂಘದ ಪ್ರಸ್ತಾವನ್ನು ಪರಿಶೀಲಿಸಲಾಗಿ ಕೇಂದ್ರ ಸರ್ಕಾರದ ವಸತಿ ಮತ್ತು ಕಾರ್ಯಾಗಾರ ನಿರ್ಮಾಣ ಯೋಜನೆ ಮಾರ್ಗ ಸೂಚಿ ಪ್ರಕಾರ ಸದರಿ ಸಂಘವು ಅರ್ಹವಿರುವುದಿಲ್ಲ ಮತ್ತು ಹಿರೇಕೆರೂರು ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ವಿವಿಧೋದ್ದೇಶ ಸಹಕಾರ ಸಂಘವು ಶೃಂಗ ಸಂಘದ ಸದಸ್ಯರಾಗಲು ಬರುವುದಿಲ್ಲದ ಕಾರಣ ಪ್ರಸ್ತಾವನೆಯನ್ನು ಪರಿಗಣಿಸಿರುವುದಿಲ್ಲ.

ಇ)

		ಗ್ರಾಮಾಂತರ ಪ್ರದೇಶ	ನಗರ ಪ್ರದೇಶ
1.	ಒಂದು ಮನೆ ಮತ್ತು ಕಾರ್ಯಾಗಾರದ ವೆಚ್ಚ	15,700-00	25,000-00
2.	ರಾಜ್ಯ ಸರ್ಕಾರದ ಸಹಾಯಧನ	3,000-00	2,500-00
3.	ಕೇಂದ್ರ ಸರ್ಕಾರದ ಸಹಾಯಧನ	3,000-00	2,500-00
4.	ಹುಡ್ಕೋ ಸಾಲ	9,700-00	19,500-00
5.	ಫಲಾನುಭವಿಗಳ ವಂತಿಕೆ		500-00

ಈ) ಈ ಸಂಘದ ಸದಸ್ಯರಿಗೆ ಕಂಡಿಕೆ (ಅ) ಉತ್ತರಿಸಿರುವಂತೆ ಈ ಯೋಜನೆ ಕಾರ್ಯ ರೂಪಕ್ಕೆ ತರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಉ) ಈ ಸಂಘದ ಸದಸ್ಯರಿಗೆ ಕಂಡಿಕೆ (ಆ) ಉತ್ತರಿಸಿರುವಂತೆ ಈ ಯೋಜನೆ ಕಾರ್ಯರೂಪಕ್ಕೆ ತರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ವಿಷಯ: ಹಿರೇಕೆರೂರಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ವಿದ್ಯಾರ್ಥಿಗಳ ವಸತಿಗೃಹ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1384 (2190)

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಸತಿಗೃಹದ ಸರ್ಕಾರಿ ಕಟ್ಟಡ ವಿಲ್ಲವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?